# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಜುಲೈ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ 4


ಪ್ರೀತಿಯ ಸಹೋದರ – ಸಹೋದರಿಯರೆ,

ಪ್ರಣಾಮಗಳು

ರಾಷ್ಟ್ರೀಯ ವಾರ್ತಾ ಪತ್ರಇದನ್ನು ಎಖೋಸ್ ಇಂಡಿಯ ಎಂದು ಪುನರ್ನಾಮಕರಣ ಮಾಡಿರುವುದನ್ನು ತಿಳಿಸಲು ನಮಗೆ ಹರ್ಷವೆನಿಸುತ್ತದೆ. ಪ್ರಪಂಚದಾದ್ಯಂತ ಪ್ರಕಟವಾಗುತ್ತಿರುವ ಎಲ್ಲ ಖಖಅಒ ವಾರ್ತಾಪತ್ರಿಕೆಗಳಿಗೆ ಸಮಾನವಾದ ಹೆಸರು ಇರಲೆಂಬ ಉದ್ದೇಶದಿಂದ ಈ ಬದಲಾವಣೆ ಮಾಡಲಾಗಿದೆ.

ರಜೆಯ ದಿನಗಳಲ್ಲಿ ದೇಶದಾತ್ಯಂತ ಆಶ್ರಮಗಳು ಮಕ್ಕಳಿಗೆ ಮತ್ತು ಯುವಜರಿಗೆ ಶಿಬಿರಗಳನ್ನು ನಡೆಸಿ ಅನೇಕ ಚಟುವಟಿಕೆಗಳಲ್ಲಿ ನಿರತವಾಗಿದ್ದವು. ಎಲ್ಲ ಪ್ರಾಂತಗಳಲ್ಲಿ ಆಯ್ದ ಆಶ್ರಮಗಳಲ್ಲಿ ಬಾಬೂಜಿಯವರ ಜನ್ಮ ದಿನೋತ್ಸವ ಆಚರಿಸಲಾಯಿತು. ಮಾನವತೆಯನ್ನು ಸಹಜಮಾರ್ಗದಡಿಯಲ್ಲಿ ತರಬೇಕೆಂಬ ಗುರುಗಳ ಬದ್ಧತೆಯನ್ನು, ಅವರ ಸ್ವತಂತ್ರ್ಯ ರಾಷ್ಟ್ರಗಳ ಒಕ್ಕೂಟ ಮತ್ತು ಯೂರೋಪಿಯನ್ ರಾಷ್ಟ್ರಗಳಲ್ಲಿ ಐವತ್ತು ದಿನಗಳ ಪ್ರವಾಸವು ಪ್ರಮಾಣಿಸಿ ತೋರಿಸಿತು ಲಖನೌನಲ್ಲಿ ನಡೆಯುತ್ತಿರುವ ಗುರುಗಳ ಜನ್ಮದಿನೋತ್ಸವದ ಸಿದ್ಧತೆಗಳು ಭರದಿಂದ ಸಾಗುತ್ತಿವೆ.

ಸೆಪ್ಟೆಂಬರ್ ಸಂಚಿಕೆಗೆ ಸುದ್ದಿಲೇಖನಗಳನ್ನು ಸ್ವೀಕರಿಸಲು ಅಂತಿಮ ದಿನ ಆಗಸ್ಟ್ 10, 2008. ಕಾರ್ಯಕ್ರಮಗಳನ್ನು ಕುರಿತು ಸುಮಾರು 100–150 ಶಬ್ದಗಳ ಲೇಖನ ಮತ್ತು ಸಂಬಂಧಪಟ್ಟ ಭಾವಚಿತ್ರವನ್ನು ನಿಮ್ಮ ಪ್ರಾಂತ್ಯದ ಮುಖ್ಯಸ್ಥರ ಮೂಲಕ ದಯವಿಟ್ಟು ಕಳುಹಿಸಿ.

ಶುಭಾಶಯಗಳೊಡನೆ,

ಸಂಪಾದಕೀಯ ತಂಡ







## ಗುರುಗಳ ಪ್ರವಾಸ ಏಪ್ರಿಲ್ –ಮೇ 2008

### ದೆಹಲಿ

ಏಪ್ರಿಲ್ 19ರಂದು ಲಖನೌನಿಂದ ಗುರುಗಳ ಆಗಮನ. ಗುರುಗಾಂವ್‌ನಲ್ಲಿ ಶ್ರದ್ಧಾಪೂರ್ವಕವಾಗಿ ಪ್ರಾರಂಭಗೊಂಡ ಪ್ರಾಂತೀಯ ಆಶ್ರಮದ ನವೀಕರಣವು ಗುರುಗಳ ಭೇಟಿಯ ವೇಳೆಗೆ ಅಂತ್ಯಗೊಂಡಿತು. ಈ ಆಶ್ರಮವು ನವೀಕರಣ ಹಾಗೂ ವಿಸ್ತರಣಗೊಂಡ ಧ್ಯಾನಮಂದಿರ, ಗುರುಕುಟೀರ, ಅಡುಗೆಮನೆ ಹಾಗೂ ಭೋಜನ ಶಾಲೆ, ಹೊಸ ಶೌಚಾಲಯ, ಕಾಂಕ್ರೀಟ್ ರಸ್ತೆಗಳು ಮತ್ತು ಹಸಿರುಹುಲ್ಲು ಹಾಸಿನಿಂದ ಹೊಸತನ ಪಡೆದು ಕಂಗೊಳಿಸುತ್ತಿದೆ.



ಗುರುಗಳು ಕುಟೀರವನ್ನು ಏಪ್ರಿಲ್ 20ರಂದು ಉದ್ಘಾಟಿಸಿದರು. ಕುಟೀರದ ಮುಂಭಾಗದ ಹುಲ್ಲುಹಾಸನ್ನು ಕಂಡು ಆನಂದಿಸಿದ ಅವರು ಉದ್ಘಾಟನೆಯ ಸಂಕೇತವಾಗಿ ಎರಡು ಗಿಡಗಳನ್ನು ನೆಟ್ಟರು.



ಸತ್ಸಂಗದ ನಂತರ ಗುರುಗಳು ಅಭ್ಯಾಸಿಗಳೊಡನೆ ಮಾತನಾಡಿದರು, ನವಜಾತ ಶಿಶುಗಳಿಗೆ ಹೆಸರನ್ನಿಟ್ಟರು, ಮಕ್ಕಳಿಗೆ ಸಿಹಿ ಹಂಚಿದರು ಮತ್ತು ಸ್ವಯಂಸೇವಕರಿಗೆ ಕಾಣಿಕೆಗಳನ್ನಿತ್ತರು. ಸಹೋದರಿ ರಂಜನರ ಭಜನೆಯು ಕಾರ್ಯಕ್ರಮಕ್ಕೆ ಕಿರೀಟಪ್ರಾಯವಾಗಿತ್ತು.

### ದುಬೈ



ಸಾಧ್ಯವಾದಷ್ಟು ಅಲ್ಪಕಾಲಿಕ ಪ್ರವಾಸ ಇರಲೆನ್ನುವ ಗುರುಗಳ ಅಪೇಕ್ಷೆಯಿಂದಾಗಿ, ಅವರ ವಿದೇಶ ಪ್ರವಾಸಗಳಲ್ಲಿ ದುಬೈ ಆರಂಭತಾಣವಾಗಿದೆ.



ಏಪ್ರಿಲ್ 22ರಂದು ಗುರುಗಳು, ಸಹೋದರ ಅಜಯ್ ಭಟ್ಟರ್ ಮತ್ತು ಇನ್ನಿತರ 25 ಅಭ್ಯಾಸಿಗಳೊಂದಿಗೆ ದೆಹಲಿಯಿಂದ ದುಬೈಗೆ ವಾಯುಯಾನ ಕೈಗೊಂಡರು. ಅಲ್ಲಿ ಒಬ್ಬ ಅಭ್ಯಾಸಿಯ ಮನೆಯಲ್ಲಿ ಉಳಿದುಕೊಂಡು ಕೆಳಮಹಡಿಯ ಸಭಾಮಂದಿರದಲ್ಲಿ ಸತ್ಸಂಗವನ್ನು ನಡೆಸಿದರು. ಅಬುಧಾಬಿ ಕೇಂದ್ರಕ್ಕೆ ಭೇಟಿ ನೀಡಲು ಸ್ವಲ್ಪ ಸಮಯವನ್ನು ತೆಗೆದಿರಿಸಿದರು. ಏಪ್ರಿಲ್ 25ರಂದು, ಯು.ಏ.ಇ ನ ಎಲ್ಲೆಡೆಯಿಂದಲೂ ಬಂದಿಳಿದ 350 ಅಭ್ಯಾಸಿಗಳು ದುಬೈನ ಇರಾನಿ ಕ್ಲಬ್‌ನಲ್ಲಿ ಸಮಾವೇಶಗೊಂಡಿದ್ದರು ಮತ್ತು ಅಲ್ಲಿ ಗುರುಗಳು ಸಮಾವೇಶ ನಡೆಸಿದರು. ಒಂದು ಗಂಟೆಯ ಹೊತ್ತು ನೀಡಿದ ಬೈಠಕಿನ ಗುಣಮಟ್ಟ ಅಳೆದ ಗುರುಗಳು ಪ್ರಶಿಕ್ಷಕರ ಸತ್ಕಾರ್ಯವನ್ನು ಮೆಚ್ಚಿಕೊಂಡರು. ಏಪ್ರಿಲ್ 26ರಂದು ಗುರುಗಳು ಮಾಸ್ಕೋಗೆ ಪ್ರಯಾಣ ಬೆಳೆಸಿದರು.

## ಸಿ.ಐ.ಎಸ್‌ನ ಅಭ್ಯಾಸಿಗಳ ಮೇಲೆ ಗುರುಗಳ ಜ್ಯೋತಿರ್ವರ್ಷ

ಸುಮಾರು ಹತ್ತು ವರ್ಷಗಳ ನಂತರ ರಷ್ಯಾ ಮತ್ತು ಬೆಲಾರಸ್‌ಗೆ ಮರುಭೇಟಿ ನೀಡಿದ ಗುರುಗಳು ಸಿ.ಐ.ಎಸ್‌ನ (ಹಿಂದಿನ ಯು.ಎಸ್.ಎಸ್.ಆರ್ ಮಾತ್ತು ರಷ್ಯಾ ಭಾಷೆ ಮಾತನಾಡುವ ರಾಷ್ಟ್ರಗಳು) ಅಭ್ಯಾಸಿಗಳ ಹೃದಯದಲ್ಲಿ ಹರುಷದ ಹೊಳೆಯುಕ್ಕಿಸಿದರು. ಮಾಸ್ಕೋನ ಕ್ಲೈಜ್ಮಾ ಪೆನ್ಷನಾಟಿನಲ್ಲಿ ಬಾಬೂಜಿ ಮಹಾರಾಜರ ಜನ್ಮದಿನೋತ್ಸವದಲ್ಲಿ ಪಾಲ್ಗೊಂಡರು. ಅಲ್ಲಿ ನೆರೆದಿದ್ದ 450 ಅಭ್ಯಾಸಿಗಳ ಅವಶ್ಯಕತೆಗಳಿಗೆ ಆಧ್ಯಾತ್ಮಿಕವಾಗಿ ಸ್ಪಂದಿಸಿದರು. ಪ್ರವಾಸ ಮತ್ತು ಅಧಿಕ ಕಾರ್ಯದೊತ್ತಡದಿಂದಾದ ಅನಾರೋಗ್ಯವಿದ್ದರೂ ಸಹ , ಪ್ರಸನ್ನಚಿತ್ತರಾಗಿ ಅಭ್ಯಾಸಿಗಳೊಡನೆ ಹಲವೊಮ್ಮ ನಿರರ್ಗಳ ರಷ್ಯಾ ಭಾಷೆಯಲ್ಲಿ ಮಾತುಕತೆ ನಡೆಸುತ್ತಿದ್ದರು ಮತ್ತು ಸಹಜಮಾರ್ಗ ಸಾಧನೆ ಮತ್ತು ಬೋಧನೆಗಳನ್ನು ವಿವರಿಸುತ್ತಿದ್ದರು. ಮಾಸ್ಕೋನಲ್ಲಿ ಧ್ಯಾನಮಂದಿರ ಆರಂಭಿಸುವ ವಿಚಾರಕ್ಕೆ ರೂಪ ನೀಡಿದರು ಮತ್ತು ಈ ಉದ್ದೇಶಕ್ಕಾಗಿ ತಾವೇ ಸ್ವತಃ ದೇಣಿಗೆ ಸ್ವೀಕಾರಕ್ಕೆಂದು ಕೈಜೋಡಿಸಿದರು.

ಮಾಸ್ಕೋದ ಒಂದು ವಾರದ ವಾಸ್ತವ್ಯದ ನಂತರ ಮುಂದಿನ ಐದು ದಿನಗಳನ್ನು ಗುರುಗಳು ಬೆಲಾರಸ್‌ನ ಮಿನ್ಸ್ಕನಲ್ಲಿ 250 ಅಭ್ಯಾಸಿಗಳ ಪ್ರೀತಿಪೂರ್ವಕ ಸಹಚರ್ಯದಲ್ಲಿ ಕಳೆದರು. ಸೋದರ ಐಗೋರ್ ಒನಿಶ್ಚೆಂಕೊ ರವರು ನಿರ್ಮಿಸುವ ಯೋಗ ಕೇಂದ್ರಕ್ಕೆ ಅವರು ಅಸ್ತಿಭಾರ ಹಾಕಿದರು. ಈ ಕೇಂದ್ರ ಮಿಷನ್ನಿನ ಸುಪರ್ದಿನಲ್ಲಿದ್ದು, ಮಿನ್ಸ್ಕ ಕೇಂದ್ರದ ಸತ್ಸಂಗ ಮತ್ತು ಇನ್ನಿತರ ಚಟುವಟಿಕೆಗಳಿಗೆ ಬಳಸಲಾಗುತ್ತದೆ.

ಗುರುಗಳು ಅನಾರೋಗ್ಯದಿಂದಾಗಿ ಮಾಸ್ಕೋನಲ್ಲಿ ಅಭ್ಯಾಸಿಗಳು ಪ್ರೀತಿಯಿಂದ ನಡೆಸಿಕೊಟ್ಟ ವರ್ಣಮಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಲಾಗಲಿಲ್ಲ. ಆದರೆ ಈ ಕೊರತೆಯನ್ನು ಬೆಲಾರಸ್ ಅಭ್ಯಾಸಿಗಳು ಮಿನ್ಸ್ಕ ಆಶ್ರಮದ ಪ್ರಾಂಗಣದೊಳಗೆ ಆಹ್ಲಾದಕರ ಬಿಸಿಲಿನಲ್ಲಿ ಗುರುಗಳ ಸಮಕ್ಷಮದಲ್ಲಿ ನೀಡಿದ ಸಂಗೀತ ನೃತ್ಯ ಕಾರ್ಯಕ್ರಮ ನೀಗಿಸಿತು. ವಾಸ್ತವವಾಗಿ ಈ ಬಿಸಿಲಿನ ಹವಾಮಾನ ಕೊನೆಯವರೆಗೂ ಮುಂದುವರೆದು, ಗುರುಗಳು ರಷ್ಯಾ ರಾಷ್ಟ್ರದಲ್ಲಿರುವ ತಮ್ಮ ಪ್ರೀತಿ ಪಾತ್ರರಿಗೆ ನೀಡಿದ ಭೇಟಿಯ ವ್ಯವಸ್ಥೆಯನ್ನು ನಿಸರ್ಗವೇ ಏರ್ಪಾಡುಮಾಡಿದಂತಿತ್ತು.

## ಯೂರೋಪಿನ ದೇಶಗಳತ್ತ






ಬಾಲ್ಟಿಕ್ ದೇಶವಾದ ಲ್ಯಾಟ್ವಿಯಾ ಹಿಂದೆ ಸೋವಿಯೆಟ್ ಗಣರಾಜ್ಯದ ವ್ಯಾಪ್ತಿಯಲ್ಲಿದ್ದು, ಈಗ ಯೂರೋಪಿಗೆ ಸೇರಿದೆ. ಇದರ ರಾಜಧಾನಿ ರೀಗಾ ಒಂದು ಪ್ರಸಿದ್ಧ ಪ್ರವಾಸಿ ತಾಣವೆನಿಸಿದ್ದು, ಇಲ್ಲಿ 40 ಅಭ್ಯಾಸಿಗಳಿದ್ದಾರೆ ಮತ್ತು ನಮ್ಮ ಕೇಂದ್ರದಲ್ಲಿ ಸಾಧಾರಣವಾದ ಆದರೆ ನಮ್ಮದೆ ಆದ ಒಂದು ಧ್ಯಾನ ಮಂದಿರವಿದೆ. ಮೇ 6ರಂದು ಗುರುಗಳು ಎರಡು ದಿನಗಳ ವಾಸ್ತವ್ಯಕ್ಕೆಂದು ಮಿನ್ಸ್ಕನಿಂದ ರೀಗಾಗೆ ವಿಮಾನದಲ್ಲಿ ಬಂದಿಳಿದರು. ಕಡಲಿಗೆ ಅಭಿಮುಖವಾಗಿದ್ದ ಹೋಟೆಲೊಂದರಲ್ಲಿ ಗುರುಗಳು ಇಳಿದುಕೊಂಡು ಅಲ್ಲಿನ ಕೋಣೆಯ ಹಜಾರದಲ್ಲಿ ಎರಡು ಸತ್ಸಂಗಗಳನ್ನು ನಡೆಸಿದರು.

ಗುರುಗಳಿಗೆ ಬೆನ್ನು ಮತ್ತು ಕಾಲುಗಳಲ್ಲಿ ತೀವ್ರವಾದ ನೋವಿತ್ತು. ಆದಾಗ್ಯೂ, ತಮ್ಮ ಯೂರೋಪಿನ ಪ್ರವಾಸವನ್ನು ಮುಂದುವರೆಸುವ ತೀರ್ಮಾನ ಕೈಗೊಂಡರು. ಒಬ್ಬ ವ್ಯಕ್ತಿಯ ಸಮಸ್ಯೆಯನ್ನು ಎಲ್ಲರೂ ಏಕೆ ಅನುಭವಿಸಬೇಕು ಎಂಬುದು ಅವರು ನೀಡಿದ ಕಾರಣ.

ತಮ್ಮ ಆರೋಗ್ಯ ದೃಷ್ಟಿಯಿಂದ ಗುರುಗಳು ಪ್ರವಾಸ ಕಾರ್ಯಕ್ರಮವನ್ನು ಬದಲಾಯಿಸಿ ಮೂರು ವಾರಗಳ ವಾಸ್ತವ್ಯಕ್ಕೆಂದು ಡೆನ್ಮಾರ್ಕ್‌ನ ವ್ರಾಡ್ಸ್ ಸ್ಯಾಂಡೆ ಆಶ್ರಮಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಅವರ ಆರೋಗ್ಯ ಸುಧಾರಿಸಿತು ಮತ್ತು ಅವರೊಡನಿರಲು ಯೂರೋಪಿನ 200 ಅಭ್ಯಾಸಿಗಳು ತಂಡಗಳಲ್ಲಿ ಬರಲಾರಂಭಿಸಿದರು. ವ್ರಾಡ್ಸ್ ಅವರಿಗೆ ಇನ್ನೊಂದು ಮನೆಯೆಂತಾಗಿಬಿಟ್ಟಿತು. ಅವರು ಹಲವೊಮ್ಮೆ ಹತ್ತಿರದ ಸ್ಥಳಗಳಿಗೆ ನಡೆದು ಹೋಗುತ್ತಿದ್ದರು. ಕೆಲವೊಮ್ಮೆ ಆಶ್ರಮದೊಳಗೆ ಅಡುಗೆ ಶಾಲೆಯತ್ತ ನಡೆದರೆ ಮತ್ತೊಮ್ಮೆ ಭೋಜನ ಶಾಲೆಗೊ ಅಥವಾ ಧ್ಯಾನ ಮಂದಿರಕ್ಕೊ ಹೋಗುತ್ತಿದ್ದರು. ಅನೇಕ ವೇಳೆ ಅವರು ಅಭ್ಯಾಸಿಗಳೊಡನೆ ಹೊರಗಡೆ ಕುಳಿತಿರುತ್ತಿದ್ದರು. ತಮ್ಮ ಕುಟೀರದ ಹಿಂಭಾಗದ ಅಟ್ಟದಿಂದ ಅವರು ಬೈಠಕ ನೀಡಿದಾಗ, ಅಭ್ಯಾಸಿಗಳು ಅಲ್ಲಿನ ಉಬ್ಬು ತಗ್ಗಿನ ಸ್ಥಳಗಳಲ್ಲೇ ಕುಳಿತುಕೊಳ್ಳುತ್ತಿದ್ದರು.







ಗುರುಗಳು ವ್ರಾಡ್ಸ್ ಸ್ಯಾಂಡೆಯನ್ನು ಒಂದು ಅಂತರರಾಷ್ಟ್ರೀಯ ಆಶ್ರಮವೆಂದು ಘೋಷಿಸಿದರು. ಈ ವಿಷಯದ ಮೇಲೆ ಒಂದು ಲಘು ಉಪನ್ಯಾಸ ನೀಡಿ, ಎಲ್ಲಡೆಯಿಂದಲೂ ವಿಶೇಶವಾಗಿ ಯುವಜನರು ವ್ರಾಡ್ಸ್ ಗೆ ಭೇಟಿ ನೀಡಲೆಂದು ಆಹ್ವಾನವಿತ್ತರು. ಮೇ 26ರ ಬೆಳಿಗ್ಗೆ, ಗುರುಗಳು 70 ಅಭ್ಯಾಸಿಗಳೊಡನೆ ವ್ರಾಡ್ಸ್‌ನಿಂದ ಹೊರಟು ನಾಲ್ಕು ದೇಶಗಳನ್ನು ದಾಟಿ, 600 ಕಿ.ಮಿ ದೂರವಿರುವ ಪ್ಯಾರಿಸನ್ನು ರಸ್ತೆ ಮಾರ್ಗವಾಗಿ ತಲುಪಿದರು. ನಗರದ ಹೋಟೆಲೊಂದರಲ್ಲಿ ಉಳಿದುಕೊಂಡ ಅವರು 28ರಂದು ಪ್ಯಾರಿಸ್‌ನ ಆಶ್ರಮದಲ್ಲಿ 200 ಅಭ್ಯಾಸಿಗಳಿಗೆ ಸತ್ಸಂಗ ನಡೆಸಿದರು.



ಮುಂದಿನ ಐದು ದಿನಗಳನ್ನು ಗುರುಗಳು ಕ್ಯಾಲೆಟ್‌ನಲ್ಲಿ ಬೆಟ್ಟಗಳ ಬಳಿ ಇದ್ದ ಅಭ್ಯಾಸಿಯೊಬ್ಬರ ಮನೆಯಲ್ಲಿ ಕಳೆದರು. ಇಲ್ಲಿ ಅವರಿಗೆ ವಿಶ್ರಾಂತಿ ಲಭಿಸಿತು. ಈ ಮಧ್ಯೆ ಅವರು ಮಾಂಟ್‌ಪೆಲ್ಲಿಯರ್ ಕೇಂದ್ರಕ್ಕೆ ಭೇಟಿ ನೀಡಿ, 150 ಅಭ್ಯಾಸಿಗಳಿಗೆ ಸತ್ಸಂಗ ನಡೆಸಿದರು.

ಜೂನ್ 5ರಂದು, ಗುರುಗಳು ಆಲ್ಪ್ಸ್ ಬೆಟ್ಟಗಳನ್ನು ದಾಟಿ 13 ಕಿ.ಮಿ ಉದ್ದದ ಸುರಂಗಮಾರ್ಗದ ಮೂಲಕ ಇಟಲಿಯ ಮಿಲಾನ್ ತಲುಪಿದರು. ಮಿಷನ್ನಿನ ಕೇಂದ್ರವಾದ ಆಸ್ತಾದಲ್ಲಿ ನಿಂತು, ಅಲ್ಲಿ ಈಟಲಿಯ ರಸಭೋಜನದ ಸವಿ ಉಂಡರು. ಮರು ದಿನ ಗುರುಗಳು, ಮಿಲಾನಿನಲ್ಲಿ ಹೊಸದಾಗಿ ಕೊಂಡ ಧ್ಯಾನ ಮಂದಿರವನ್ನು ಉದ್ಘಾಟಿಸಿ ಆ ದಿನ ಮತ್ತು ಮಾರನೆಯ ದಿನ ಸತ್ಸಂಗವನ್ನು ನಡೆಸಿದರು.

ಜೂನ್ 8ರಂದು ಗುರುಗಳು, ಸಿ.ಐ.ಎಸ್ ಮತ್ತು ಯೂರೋಪಿಗೆ ನೀಡಿದ ಚಾರಿತ್ರಿಕ ಪ್ರವಾಸವನ್ನು ಅಂತ್ಯಗೊಳಿಸಿ ದುಬಾಯಿಗೆ ವಾಯುಮಾನ ಬೆಳೆಸಿದರು. ಅಲ್ಲಿಂದ ಜೂನ್ 15ರಂದು ಭಾರತಕ್ಕೆ ಹಿಂದಿರುಗುವರು.

ಎಸ್ ಆರ್ ಸೀ ಎಮ್

ಎಖೋಸ್ ಇಂಡಿಯ

ಪ್ರಧಾನ ಕೇಂದ್ರ

ಜುಲೈ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ 4

**ಎಸ್.ಎಮ್.ಎಸ್.ಎಫ್ ವಿಶಾಂತಿಧಾಮ, ಮಲಂಪುಳ:**

ಕೇರಳದ ಮಲಂಪುಳದಲ್ಲಿ ವಿಶ್ರಾಂತಿಧಾಮಪ್ರಾರಂಭವಾದುದು 14.04.08ರಂದು. ಇದು ಮಿಷನ್ನಿನ ಪ್ರಥಮ ವಿಶ್ರಾಂತಿಧಾಮವಾದರೆ ಎರಡನೆಯದು ಪುಣೆಯಲ್ಲಿ ಕಾರ್ಯಾರಂಭ ಮಾಡಿದೆ.

ಈ ಕೇಂದ್ರದಲ್ಲಿ 48 ಅಭ್ಯಾಸಿಗಳಿಗೆ ವಸತಿ ಸೌಲಭ್ಯವಿದ್ದು, ಸ್ತ್ರೀ ಮತ್ತು ಪುರುಷರಿಗೆ ಪ್ರತ್ಯೇಕ ವಿಭಾಗಗಳಿವೆ. ಹಿರಿಯರ ವಾಸ್ತವ್ಯ ಸಾಧ್ಯವಾದಷ್ಟೂ ನೆಲ ಅಂತಸ್ತಿನಲ್ಲೇ. ಉಳಿದು ಕೊಳ್ಳುವವರಿಗೆ ಮಂಚ, ಹಾಸಿಗೆ ಮತ್ತು ಹೊದಿಕೆಗಳ ಸೌಲಭ್ಯವೂ ಇದೆ. ವಸತಿ ಉಚಿತ. ಒಬ್ಬ ವ್ಯಕ್ತಿ ಕನಿಷ್ಟ 3 ದಿನಗಳಿಂದ ಗರಿಷ್ಟ 30 ದಿನಗಳ ವರೆಗೆ ಇಲ್ಲಿರಬಹುದು. ಪತಿ–ಪತ್ನಿಯರಿಗೆ ಏಕಕಾಲಕ್ಕೆ ವಸತಿ ಸೌಲಭ್ಯವಿಲ್ಲ. ಮಕ್ಕಳಿಗೆ ಅವಕಾಶವಿಲ್ಲ.

ಕೇಂದ್ರವು ಚೆಂಬ ಬಸ್ ನಿಲ್ದಾಣದ ಬಳಿಯ ಕಾವ ಎಂಬಲ್ಲಿದೆ. ಮಲಂಪುಳ ಬಸ್ ನಿಲ್ದಾಣದಿಂದ 6 ಕಿ.ಮಿ ದೂರ. ಅಲ್ಲದೆ ಪಾಲಕ್ಕಾಡ್ ರೈಲು ನಿಲ್ದಾಣದಿಂದ 15 ಕಿ.ಮಿ, ಪಾಲಕ್ಕಾಡ್ ಪಟ್ಟಣದಿಂದ 20 ಕಿ.ಮಿ ಮತ್ತು ಕೊಯಮತ್ತೂರ್ ವಿಮಾನ ನಿಲ್ದಾಣದಿಂದ 55 ಕಿ.ಮಿ ದೂರದಲ್ಲಿದೆ. ಪಾಲಕ್ಕಾಡಿನಿಂದ ಮಲಂಪುಳಕ್ಕೆ ವ್ಯವಸ್ಥಿತವಾದ ಬಸ್ ಸೌಲಭ್ಯವಿದ್ದು, ಮಲಂಪುಳದಿಂದ ಕೇಂದ್ರಕ್ಕೆ ಟಾಕ್ಸಿ, ಜೀಪ್, ಆಟೋರಿಕ್ಷಾಗಳ ಓಡಾಟವೂ ಇದೆ. ಮಲಂಪುಳದಿಂದ ಕಾವಕ್ಕೆ ಬಸ್ ಸೌಲಭ್ಯವಿದ್ದರೂ ಸಂಚಾರ ಬಹಳ ಕಡಿಮೆ. ನಡೆದುಹೋಗಬಹುದು. ಪ್ರವಾಸಿಗರ ಅನುಕೂಲಕ್ಕಾಗಿ, ಚೆಂಬ ಬಸ್ ನಿಲ್ದಾಣದಲ್ಲಿ ಎಸ್.ಎಮ್.ಎಸ್.ಎಫ್‌ನ ನಾಮಫಲಕ ಹಾಕಲಾಗಿದೆ. ಚೆಂಬ ಬಸ್ ನಿಲ್ದಾಣದಲ್ಲಿರುವ ಒಂದು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ರನ್ನು ಹೆಗ್ಗುರುತಾಗಿ ಇಟ್ಟುಕೊಳ್ಳಬಹುದು.

ವಿಶ್ರಾಂತಿಧಾಮದಲ್ಲಿ ನೋಂದಣಿಗಾಗಿ ಸಂಪರ್ಕಿಸಿ:

http://sahajmarg.org/welcome/retreat/index.html

## 'ಅವರ್ ಮಾಸ್ಟರ್' ಮಾಸ್ಕೋನಲ್ಲಿ ಬಿಡುಗಡೆ




ಏಪ್ರಿಲ್30, 2008ರಂದು ಮಾಸ್ಕೋನಲ್ಲಿ ಪೂಜ್ಯ ಗುರುಗಳು 'ಅವರ್ ಮಾಸ್ಟರ್' ಪುಸ್ತಕವನ್ನು ಬಿಡುಗಡೆ ಮಾಡಿದರು. ಇದು ಗುರುಗಳೊಡನೆ ಅನೇಕ ವರ್ಷಗಳ ಒಡನಾಟವಿರುವ ಅಭ್ಯಾಸಿಗಳು ಬರೆದ ಲೇಖನಗಳ ಸಂಗ್ರಹವಾಗಿದ್ದು, ಇದರಲ್ಲಿ ಅವರ ಸ್ಮರಣೀಯ ಅನುಭವಗಳ ಮತ್ತು ಭಾವನೆಗಳ ಚಿತ್ರಣವಿದೆ.

## ಲಖನೌ



ಏಪ್ರಿಲ್ 16ರಂದು ಗುರುಗಳು ಲಖನೌಗೆ ಭೇಟಿ ನೀಡಿ ಹಬ್ಬದ ಸಂಭ್ರಮದ ನಡುವೆ ಹೊಸದಾಗಿ ನಿರ್ಮಾಣಗೊಂಡ ಗುರುಕುಟೀರವನ್ನು ಉದ್ಘಾಟಿಸಿದರು. ಎರಡು ಎಕರೆ ಪ್ರದೇಶದಲ್ಲಿ ನಿರ್ಮಿತವಾಗಿರುವ ಈ ಕುಟೀರದ ಸುತ್ತಲೂ ಹಚ್ಚ ಹಸುರಿನ ವಾತಾವರಣವಿದೆ. ಈ ಸಮಾರಂಭಕ್ಕೆ ಬೇರೆ–ಬೇರೆ ಊರುಗಳಿಂದ ಬಂದವರ ಸಂಖ್ಯೆ ಸುಮಾರು 4000.

## ಇನ್ನೇನು ಬಂತು ಜುಲೈ ಉತ್ಸವ!

ಪೂಜ್ಯ ಗುರುಗಳ 81ನೇ ಜನ್ಮವಾರ್ಷಿಕೋತ್ಸವ ಉತ್ತರ ಪ್ರದೇಶದ ಲಖನೌನಲ್ಲಿ ಜುಲೈ 23ರಿಂದ 25ರ ವರೆಗೆ ನಡೆಯಲಿದೆಯೆಂದು ನಮ್ಮ ಓದುಗರಿಗೆ ನೆನಪಿಸುತ್ತಿದ್ದೇವೆ. ಸಿದ್ಧತೆಗಳು ರಭಸದಿಂದ ಸಾಗಿವೆ. ದೇಶಾದ್ಯಂತ ಇದುವರೆಗು 25000ಕ್ಕೂ ಹೆಚ್ಚು ಜನ ನೋಂದಣಿ ಮಾಡಿಸಿದ್ದು, ಇದು 35000 ಮುಟ್ಟುವ ನಿರೀಕ್ಷೆ ಇದೆ.

ಲಖನೌ ಆಶ್ರಮವು ಸೀತಾಪುರ–ಹಾರ್‌ದೋಯಿ ಮುಖ್ಯ ರಸ್ತೆಯಲ್ಲಿದ್ದು, ಭಾರತೀಯ ಮ್ಯಾನೇಜ್‌ಮೆಂಟ್ ಸಂಸ್ಥೆಯ ಬಳಿ 100 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ಇದು ಲಖನೌ ರೈಲು ನಿಲ್ದಾಣದಿಂದ 20 ಕಿ.ಮಿ ಮತ್ತು ವಿಮಾನ ನಿಲ್ದಾಣದಿಂದ 25 ಕಿ.ಮಿ ದೂರ. ಈ ಎರಡೂ ಸ್ಥಳಗಳಲ್ಲಿ ಅಭ್ಯಾಸಿಗಳು ಹೋಗಿ ಬರಲು ವ್ಯವಸ್ಥೆ ಮಾಡಲಾಗಿದೆ. ಜುಲೈ ತಿಂಗಳು ಸೆಖೆ ಮತ್ತು ತೇವಾಂಶದಿಂದ ಕೂಡಿರುವ ಪ್ರಯುಕ್ತ, ಅಭ್ಯಾಸಿಗಳು ತಮ್ಮೊಡನೆ ಛತ್ರಿ ಅಥವಾ ಮಳೆಯಂಗಿ ಮತ್ತು ಬೀಸಣಿಗೆ ತರಬೇಕೆಂದು ಕೋರಲಾಗಿದೆ. 150,000 ಚದರಡಿಯ ಧ್ಯಾನಮಂದಿರ, 100,000 ಚದರಡಿಯ ಭೋಜನಶಾಲೆ ಹಾಗೂ ಶಿಬಿರಗಳಿಗೆ ಜಲನಿರೋಧಕ ಛಾವಣಿಗಳನ್ನು ಹಾಕಲಾಗಿದೆ. ಲಭ್ಯವಾಗುವ ಇತರ ಮುಖ್ಯ ಸೌಲಭ್ಯಗಳೆಂದರೆ, ಆಂಬ್ಯುಲೆನ್ಸ್ ಸೇವೆ ಇರುವ ವೈದ್ಯಕೀಯ ಕೇಂದ್ರ, ಬ್ಯಾಂಕ್ ಮತ್ತು ಅಂತರ್ಜಾಲ ವ್ಯವಸ್ಥೆ, ವಿಶಾಲವಾದ ಕ್ಯಾಂಟೀನ್, ಮಕ್ಕಳ ವಿಭಾಗ, ಪುಸ್ತಕ ಮಳಿಗೆ ಮತ್ತು ನೋಂದಣಿ ವಿಭಾಗ.

ಎಲ್ಲಾ ಅಭ್ಯಾಸಿ ಸಹೋದರ – ಸಹೋದರಿಯರಿಗೂ ಉಚಿತ ವಸತಿ ಸೌಕರ್ಯವಿದೆ. ಹಾಸಿಗೆಗಳ ಮಾರಾಟ ಲಭ್ಯವಿದೆ, ಅಲ್ಲದೆ ಮೊದಲು ಬಂದವರಿಗೆ ಕೆಲವೇ ಹಾಸಿಗೆಗಳು ಬಾಡಿಗೆಗೂ ಸಿಗುತ್ತವೆ. ಇದಲ್ಲದೇ, ಹಾಸಿಗೆ, ದಿಂಬು, ಹೊದಿಕೆ ಮತ್ತು ಸೊಳ್ಳೆಪರದೆ ಸೌಕರ್ಯವಿರುವ ಸುಖ–ಶಯನ ಶಿಬಿರಗಳು ಏರ್ಪಾಡಾಗಿವೆ.


ಈ ಉತ್ಸವದಲ್ಲಿ ಜೀವನ ಸಂಗಾತಿಗಳಾಗುವ ಅಭ್ಯಾಸಿಗಳ ಕುಟುಂಬದವರಿಗಾಗಿ ಮತ್ತು ತಮ್ಮ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಳ್ಳುವ ಅಭ್ಯಾಸಿಗಳಿಗಾಗಿ, ಉಪಾಹಾರ ಮತ್ತು ಭೋಜನಗಳ ವಿಶೇಷ ವ್ಯವಸ್ಥೆ ಇದೆ.

ಉತ್ಸವದ ಪೂರ್ವೋತ್ತರ ವ್ಯವಸ್ಥಾ ಕಾರ್ಯಗಳಿಗಾಗಿ ಅನೇಕ ಸ್ವಯಂ ಸೇವಕರ ಅವಶ್ಯಕತೆ ಇದೆ. 3000ಕ್ಕಿಂತಲೂ ಅಧಿಕ ಮಕ್ಕಳು ಬರುವ ನಿರೀಕ್ಷೆ ಇದ್ದು ಅವರನ್ನು ನೋಡಿಕೊಳ್ಳಲು ತರಬೇತಿ ಪಡೆದ ಸ್ವಯಂ ಸೇವಕರ ಅಗತ್ಯವಿದೆ. ಕೆಲಸ ಮಾಡಲಿಚ್ಛಿಸುವ ಸ್ವಯಂಸೇವಕರನ್ನು ಈ ವಿಳಾಸಕ್ಕೆ ಕಳುಹಿಸಲು ಎಲ್ಲಾ ಕೇಂದ್ರಗಳಿಗೂ ನಮ್ಮ ಕೋರಿಕೆ.

mehrotrashyamji@yahoo.co.in

ಈ ಉತ್ಸವವನ್ನು ಯಶಸ್ವಿಯಾಗಿ ನಿರ್ವಹಿಸಲು ನಾವು ನಿಮ್ಮೆಲ್ಲರ ಬೆಂಬಲ ಹಾಗು ನೆರವನ್ನು ಎದುರು ನೋಡುತ್ತಿದ್ದೇವೆ. ನಾವೆಲ್ಲ ಜೊತೆಗೂಡಿ ಈ ಶುಭ ಸಮಾರಂಭವನ್ನು ಸ್ಮರಣೀಯವಾಗಿ ಮಾಡೋಣ.

# ಬಾಬೂಜಿಯವರ 109ನೇ ಜನ್ಮವಾರ್ಷಿಕೋತ್ಸವ



## ಮೈಸೂರು:

ಏಪ್ರಿಲ್ 30ರಂದು ನಡೆದ ಪೂಜ್ಯ ಬಾಬೂಜಿ ಮಹಾರಾಜರ ಜನ್ಮದಿನೋತ್ಸವಕ್ಕಾಗಿ, ಮೈಸೂರು, ಹಾಸನ, ಹುಣಸೂರು, ಹಾನೂರು, ಚಿಕ್ಕಮಗಳೂರು, ಕೊಳ್ಳೇಗಾಲ, ಬೆಂಗಳೂರು, ಪಿರಿಯಾಪಟ್ಟಣ, ಕುಶಾಲನಗರ, ಟಿ-ನರಸೀಪುರ ಮತ್ತು ಚಾಮರಾಜನಗರ ಕೇಂದ್ರಗಳ ಅಭ್ಯಾಸಿಗಳು ಮೈಸೂರಿನ, ಪ್ರಾದೇಶಿಕ ಆಶ್ರಮದಲ್ಲಿ ಸೇರಿದಾಗ ಅಲ್ಲಿ ಜೀವಕಳೆ ತುಂಬಿತು.



ಎರಡು ಸತ್ಸಂಗಗಳು ಸೇರಿದಂತೆ ಅಭ್ಯಾಸಿಗಳು ಆ ದಿನ ಪೂರ್ಣ ಪ್ರಯೋಜನವನ್ನು ಪಡೆದುಕೊಂಡರು. ಬಾಬೂಜಿ ಮಹಾರಾಜರ ಬದುಕು ಮತ್ತು ಬೋಧನೆಗಳನ್ನು ಕುರಿತಂತೆ ವಿಡಿಯೋ ಪ್ರದರ್ಶನವಿತ್ತು. ಇದಕ್ಕೆ ಪೂರಕವೆಂಬಂತೆ ಸೋದರಿ ಕಲ್ಪನ, ಬಾಬೂಜಿ ಮಹಾರಾಜರ ಚಿತ್ರಗಳನ್ನು ಪ್ರದರ್ಶಿಸಿದರು. ಇದೇ ವಿಷಯದ ಮೇಲೆ ಹುಣಸೂರು ಅಭ್ಯಾಸಿಗಳು ರಸಪ್ರಶ್ನೆ ನಡೆಸಿದ ನಂತರ, ಮಕ್ಕಳು ವೇದಿಕೆ ಮೇಲೆ ಬಂದು ಹಾಡು, ಹಾಸ್ಯ, ಪ್ರಾರ್ಥನೆ ಮತ್ತು ಭಾಷಣದ ಕಾರ್ಯಕ್ರಮ ನಡೆಸಿಕೊಟ್ಟರು. ಮಕ್ಕಳು ಗುರುಗಳ ಮತ್ತು ಪದ್ಧತಿಯ ಬಗ್ಗೆ ಚೆನ್ನಾಗಿ ಹಾಗೂ ಪರಿಣಾಮಕಾರಿಯಾಗಿ ಆಡಿದ ಮಾತುಗಳು ಹೃದಯಸ್ಪರ್ಷಿಯಾಗಿದ್ದವು.

ಇಡೀ ವಾತಾವರಣವು, ಗುರುಗಳ ಸಾನ್ನಿಧ್ಯದಿಂದ ತುಂಬಿ ಅದರ ಪ್ರಭಾವ ಎಲ್ಲೆಡೆ ಪ್ರಸರಿಸಿತ್ತೆಂದು ವಿಶೇಷವಾಗಿ ಹೇಳಬೇಕಾಗಿರಲಿಲ್ಲ ಮತ್ತು ಅಲ್ಲಿ ನೆರದಿದ್ದ ಎಲ್ಲರಿಗೂ ವಿಶೇಷವಾದ ಅಧ್ಯಾತ್ಮಿಕ ಪ್ರಯೋಜನ ಉಂಟಾಯಿತು.

## ಉತ್ತರಖಂಡ

ಹಿಮಾಲಯದ ಹಿನ್ನೆಲೆಯುಳ್ಳ ಈ ಗುಡ್ಡನಾಡು ಪ್ರದೇಶ ಬಾಬೂಜಿಯವರ ಜನ್ಮದಿನದಂದು ಅವರ ಹೆಸರನ್ನು ಪ್ರತಿಧ್ವನಿಸುತ್ತಿತ್ತು. ಹಿಮಾಲಯದಲ್ಲಿ ಮಿಷನ್ನಿಗೆ ಮುಕುಟಪ್ರಾಯವಾದ ಆಶ್ರಮವೆನಿಸಿದ ಸತ್ಖೋಲಿನಲ್ಲಿ ಸುತ್ತಮುತ್ತ ಕೇಂದ್ರಗಳಿಂದ ಬಂದು ಸೇರಿದ 140 ಅಭ್ಯಾಸಿಗಳು ಈ ದಿನವನ್ನು ಭಕ್ತಿ ಮತ್ತು ಉತ್ಸಾಹಗಳಿಂದ ಆಚರಿಸಿದರು. ರಾಜ್ಯದ ರಾಜಧಾನಿ ಡೆಹರಾಡೂನಿನಲ್ಲಿ ಸತ್ಸಂಗಗಳೂ, ಭಜನೆಗಳೂ, ವಿಡಿಯೋ ಪ್ರದರ್ಶನ ಮತ್ತು ಬಾಬೂಜಿ ಮಹಾರಾಜರ ಬದುಕು ಮತ್ತು ಬೋಧನೆಗಳನ್ನು ಕುರಿತು ಉಪನ್ಯಾಸಗಳು ಏರ್ಪಾಡಾಗಿದ್ದವು. ಇನ್ನಿತರ ಕೇಂದ್ರಗಳಾದ ರೂರ್ಕಿ, ಪಿತೋರಾಗಡ್, ಹಲ್ದವಾನಿ ಮತ್ತು ಕಾಶೀಪುರದಲ್ಲೂ ಈ ದಿನವು ಉತ್ಸಾಹಪೂರಿತವಾಗಿ ಆದರಿಸಲ್ಪಟ್ಟಿತು..

## ಕೊಲ್ಲಾಪುರ

ಕೊಲ್ಲಾಪುರ, ಮೀರಜ್, ಸತಾರ ಮತ್ತು ಪುಣೆಯಿಂದ ಬಂದ ಅಭ್ಯಾಸಿಗಳ ಸಭೆ ಉತ್ಸಾಹದಿಂದ ಕಳೆಗಟ್ಟಿತ್ತು. ಬೆಳಗಾವಿ, ಗುಲ್ಬರ್ಗ ಮತ್ತು ಗೊಂದಿಯಾದಿಂದಲೂ ಸಹ ಕೆಲ ಅಭ್ಯಾಸಿಗಳು ಬಂದಿದ್ದರು.

ಬೆಳಿಗ್ಗೆ ಮತ್ತು ಸಂಜೆಯ ಸತ್ಸಂಗಳ ನಡುವೆ ಬಾಬೂಜಿಯವರ ಜೀವನ ಮತ್ತು ಬೋಧನೆಗಳನ್ನು ಕುರಿತು ಅಭ್ಯಾಸಿಗಳು ಮಾತನಾಡಿದರು. ಸಹೋದರಿ ನೂರಿ ಮತ್ತು ಸಹೋದರ ಗೋಪಾಲ್ ಬಾಬೂಜಿಯವರ ಪ್ರಾಪಂಚಿಕ ಜೀವನ ಮತ್ತು ಲಾಲಾಜಿ ಮಹಾರಾಜರ ಆಶ್ರಯದಲ್ಲಿ ಅವರ ಅಧ್ಯಾತ್ಮಿಕ ವಿಕಾಸದ ಬಗ್ಗೆ ಮಾತನಾಡಿದರು. ಸಹೋದರಿ ಲತ ಪಾಟೀಲರು ತಿಳಿಸಿದ ವಿಷಯವೆಂದರೆ ಬಾಬೂಜಿ ಮತ್ತು ಅವರ ಪ್ರಮುಖ ಶಿಷ್ಯರೂ ಹಾಗೂ ನಮ್ಮ ಗುರುಗಳೂ ಆದ ಚಾರೀಜಿ ನಡುವಿನ ಸಂಬಂಧ. ಸಹೋದರಿ ಅರುಂಧತಿ ಕಾಳೆ ಮತ್ತು ಸಹೋದರ ಸುಧಾಕರ್ ಜೋಶಿಗಳಾದರೋ ಬಾಬೂಜಿ ಮಾಹಾರಾಜರೊಡನೆ ತಮಗಾದ ಅನುಭವಗಳನ್ನು ಹಂಚಿಕೊಂಡರು.

ಸಮಾರಂಭವು ಸಹೋದರಿ ಸ್ನೇಹ ರಾಜೂರೀಕರ್ ಹಾಡಿದ ಭಜನೆಗಳೊಂದಿಗೆ ಮುಕ್ತಾಯಗೊಂಡಿತು. ಈ ಕಾರ್ಯಕ್ರಮ ಯಶಸ್ವಿಯಾಗಲು ಎಲ್ಲ ಕೇಂದ್ರಗಳಿಂದ ಬಂದಿದ್ದ ಸ್ವಯಂಸೇವಕರ ಅವಿರತ ಪರಿಶ್ರಮವೇ ಕಾರಣ.

## ವಡೋದರ

ಗುಜರಾತ್ ಪ್ರಾಂತದ ಸುಮಾರು 1300 ಅಭ್ಯಾಸಿಗಳಿಗಾಗಿ ನಡೆದ ಸಮಾರಂಭದ ಹೊಣೆ ಹೊತ್ತಿದ್ದು ವಡೋದರ ಕೇಂದ್ರ. ನಿಸರ್ಗವು ಲಘು ವರ್ಷದ ಸಿಂಚನಗೈದು ತನ್ನ ಪ್ರೀತಿಪೂರ್ವಕ ಅನುಗ್ರಹ ಸುರಿಸಿತು. ನಮ್ಮನ್ನು ಅಸಾಮಾನ್ಯ ಆಳಗಳಿಗೆ ಕರೆದೊಯ್ದ ಒಂದು ಭವ್ಯ ಸತ್ಸಂಗದ ನಂತರ, ಈಗಾಗಲೇ ಧ್ಯಾನದಲ್ಲಿ ಮೃದುಗೊಂಡ ಹೃದಯಗಳು 'ಗುರುಗಳ ಆಯ್ಕೆ' ಎಚಿಬ ಡಿ.ವಿ.ಡಿಯಿಂದ ಕೇಳಿಬಂದ ಹೃದಯಸ್ಪರ್ಷಿ ಸಂಗೀತದಿಂದ ಕರಗಿಹೋದವು. ಪೂಜ್ಯ ಗುರುಗಳು ಇತ್ತೀಚೆಗೆ ಗೋವಾದಲ್ಲಿ ಅನುಗ್ರಹಿಸಿದ ಉಪನ್ಯಾಸವನ್ನು ಒಂದು ಸಂದೇಶದಂತೆ ಇಂಗ್ಲೀಷ್ ಮತ್ತು ಗುಜರಾತಿ ಭಾಷೆಗಳಲ್ಲಿ ಓದಲಾಯಿತು.

ಧ್ಯಾನ ಮಾಡದ ಸಮಯದಲ್ಲೂ ಸಹ ಗುರುಗಳ ಸಾನ್ನಿಧ್ಯದ ಅನುಭೂತಿ ಪಡೆಯುತ್ತ ಗುರುಗಳೊಡನೆ ಒಂದು ಶಾಶ್ವತವಾದ ಆಂತರಿಕ ಸಂಪರ್ಕವನ್ನು ಬೆಳೆಸಿಕೊಳ್ಳುವ ಅವಶ್ಯಕತೆಯನ್ನು ಸಹೋದರ ಸುರೇಶರು ಒತ್ತಿ ಹೇಳಿದರು. ಆಧ್ಯಾತ್ಮಿಕತೆಗೆ ಆದ್ಯತೆ ನೀಡಬೇಕೆಂದು ಮತ್ತು ಪರಿಣಾಮಕಾರಿಯಾದ ಪ್ರಗತಿಹೊಂದಲು ಉತ್ಸಾಹವನ್ನು ತಮ್ಮ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕೆಂದು ಅವರು ಎಲ್ಲರನ್ನೂ ಹುರುದುಂಬಿಸಿದರು. 'ಸ್ವಯಂ ಸೇವೆ-ಪ್ರಗತಿಗೆ ಒಂದು ಆದರ್ಶ ಮಾರ್ಗ' ಎಂಬ ವಿಷಯದ ಮೇಲೆ ಸೋದರ ರಾಜೇಂದ್ರ ರಾಥೋಡ್ ನೀಡಿದ ಭಾಷಣ ಅಭ್ಯಾಸಿಗಳಿಗೆ ತಮ್ಮ ಹೆಸರನ್ನು ಜುಲೈ 2008ರ ಉತ್ಸವಕ್ಕೆ ನೋಂದಾಯಿಸಲು ಸ್ಫೂರ್ತಿ ನೀಡಿತು.

ಭೋಜನ ನಂತರ ಅಭ್ಯಾಸಿಗಳು ಆನಂದ್, ಅಂಕಲೇಶ್ವರ್, ಭರೂಚ್, ಭಾವನಗರ ಮತ್ತು ವಡೋದರ ಕೇಂದ್ರದವರು ಪ್ರಸ್ತುತ ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲೆಂದು ಧ್ಯಾಮಮಂದಿರದಲ್ಲಿ ನೆರೆದರು. ಅಭ್ಯಾಸಿಗಳು ಮತ್ತು ಅವರ ಮಕ್ಕಳು ಗೀತೆಗಳು, ಹಾಸ್ಯ ಪ್ರಸಂಗಗಳು ಮತ್ತು ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಚಹ ವಿರಾಮದ ನಂತರ, ಸಹೋದರಿ ಸುಮನ್ ದವೆ, ಸಹೋದರ ಭರತ್ ತಾನ್ನ ಮತ್ತು ಸಹೋದರ ಪುನೀತ್ ಲಾಲ್ಭಾಯಿ ಕ್ರಮವಾಗಿ 'ಸಹಜಮಾರ್ಗದ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ', 'ಸಾಧನೆಯಲ್ಲಿ ಕ್ರಮಬದ್ಧತೆ' ಮತ್ತು 'ಸಹಜಮಾರ್ಗದಲ್ಲಿ ಯುವಜನರ ಪಾತ್ರ' ಈ ವಿಷಯಗಳನ್ನು ಕುರಿತು ಮಾತನಾಡಿದರು. ಇದಾದಮೇಲೆ, ಬಾಬೂಜಿ ಮಹಾರಾಜರ ಯೂರೋಪ್ ಪ್ರವಾಸ ಕುರಿತ ವಿಡಿಯೋವನ್ನು ಪ್ರದರ್ಶಿಸಲಾಯಿತು.



## ಮುಕ್ತ ಸಭಾ ಸಮಾವೇಶಗಳು

### ಮಂಗಳೂರು



ಏಪ್ರಿಲ್ 3, 2008 ರಂದು ಮಂಗಳೂರಿನ ಚೇತನ ಶಾಲೆಯಲ್ಲಿ ಮುಕ್ತಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದು ಮುಖ್ಯವಾಗಿ ವಿದ್ಯಾರ್ಥಿಗಳ ಮಾತಾಪಿತೃಗಳಿಗಾಗಿ. ಕೇಂದ್ರ ಸಂಚಾಲಕಿಯಾದ ಸಹೋದರಿ ಗೀತಾ ಆಚಾರ್ಯರವರ ನೆರವಿನೊಂದಿಗೆ ಶಾಲೆಯ ಉತ್ಸಾಹಿ ಕಾರ್ಯಕಾರಿಣಿ ಡಾ. ಸಬಿತಾರವರು ಈ ಸಮಾವೇಶದ ರೂವಾರಿಯಾಗಿದ್ದರು.

ಶ್ರೀ ರಾಮಚಂದ್ರ ಮಿಷನ್ನಿನ ಪ್ರಶಿಕ್ಷಕಿಯೂ, ಹತ್ತಿರದ ಉಪ್ಪಿನಂಗಡಿಯ ಕಾಲೇಜಿನಲ್ಲಿ ಪ್ರಾಂಶುಪಾಲರೂ ಆದ ಸಹೋದರಿ ವಸಂತಕುಮಾರಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಚರ್ಚಾಗೋಷ್ಠಿಗಳಾದವು. ಚರ್ಚಿಸಲಾದ ಅಂಶಗಳೆಂದರೆ– ಮಕ್ಕಳನ್ನು ಮತ್ತು ವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳುವುದು ಅವರ ಸಾಮರ್ಥ್ಯ ಮತ್ತು ದೌರ್ಬಲ್ಯಗಳೊಂದಿಗೆ ಅವರ ಸ್ವೀಕಾರ, ಪ್ರೇಮ ಭರಿತವಾದ ತಾಳ್ಮೆ ಮತ್ತು ಸಹಿಷ್ಣುತೆ. ಆಧ್ಯಾತ್ಮಿಕತೆಯು ಜೀವನದ ಸೂಕ್ತ ಮನೋಭಾವಗಳನ್ನು ಹೇಗೆ ಉತ್ತಮಗೊಳಿಸುವುದೆಂಬುದನ್ನು ವಿವರವಾಗಿ ತಿಳಿಸಲಾಯಿತು. ಪ್ರಸ್ತುತರಿದ್ದ ತಾಯಿ ತಂದೆಯರು ಧನಾತ್ಮಕವಾಗಿ ಮತ್ತು ಉತ್ಸಾಹಭರಿತವಾಗಿ ಸ್ಪಂದಿಸಿದರು.

### ಕಾರ್ಕಳ:



ಮೇ 18, 2008ರಂದು ಕಾರ್ಕಳದ ಆನೆಕೆರೆಯಲ್ಲಿ ಸ॥ರಮಾನಂದ ಭಟ್‌ರವರ ಮನೆಯಲ್ಲಿ ಮುಕ್ತಸಭೆ ನಡೆಯಿತು. ಸುಮಾರು 20 ಅತಿಥಿಗಳಿದ್ದರು. ಸಹಜಮಾರ್ಗ ಪದ್ಧತಿ ಮತ್ತು ಸಮತೋಲನದ ಜೀವನದಲ್ಲಿ ಆಸಕ್ತಿಯುಳ್ಳವರಿಗೆ ಸಹಜಮಾರ್ಗವು ಏನನ್ನು ನೀಡಬಲ್ಲದು ಎಂಬ ಬಗ್ಗೆ ಮಂಗಳೂರಿನ ಸಹೋದರಿ ಪುಷ್ಪರವರು ಆರಂಭಿಕ ಉಪನ್ಯಾಸ ನೀಡಿದರು. ಅವರು ವೈದಿಕ ಸಾಹಿತ್ಯ, ಭಗವದ್ಗೀತೆ, ಬೌದ್ಧಧರ್ಮದ ಉದಾಹರಣೆಗಳು ಹಾಗೂ ಹಲವು ಭಕ್ತಿಗೀತೆಗಳ ವಿವರಣೆಗಳೊಂದಿಗೆ ತಮ್ಮ ಉಪನ್ಯಾಸವನ್ನು ಸಂಪನ್ನಗೊಳಿಸಿದರು.

### ಉಡುಪಿ:

'ರೋಬೋಸಾಫ್ಟ್'ನ ಸಮ್ಮೇಳನಾಂಗಣದಲ್ಲಿ 'ಉತ್ತಮ ಜೀವನಕ್ಕಾಗಿ ಧ್ಯಾನ' ಎಂಬ ವಿಷಯದಲ್ಲಿ ನಡೆಸಲಾದ ಸಮಾವೇಶದಲ್ಲಿ 'ರೋಬೋಸಾಫ್ಟ್'ನ 100ಕ್ಕೂ ಹೆಚ್ಚಿನ ಉದ್ಯೋಗಿಗಳಿದ್ದರು. ಸ॥ರಮಾನಂದ ಭಟ್‌ರವರು ಸಹಜಮಾರ್ಗದ ಪರಿಚಯ ನೀಡಿ ಸ॥ಮೋಹನ್ ರವರನ್ನು ಉತ್ತಮ ಜೀವನಕ್ಕೆ ಸಹಜಮಾರ್ಗವು ಏನನ್ನು ನೀಡಬಲ್ಲದು ಎಂಬ ಬಗ್ಗೆ ವಿವರವಾಗಿ ಉಪನ್ಯಾಸ ನೀಡಲು ಆಹ್ವಾನಿಸಿದರು. ಸ॥ಮೋಹನ್ ರವರು ಧ್ಯಾನ, ಧ್ಯಾನ ಚರಿತ್ರೆ, ಧ್ಯಾನದ ಅಗತ್ಯತೆ, ಮಾನವನ ವಿಕಾಸ ಮತ್ತು ಸಹಜಮಾರ್ಗವು ಮಾರ್ಪಡಿಸಲಾದ ರಾಜಯೋಗ ಇವುಗಳ ಬಗ್ಗೆ ಮಾತನಾಡಿದರು.

ಸಾಧನೆ ಪ್ರಾರಂಭಿಸಲು ಆಸಕ್ತಿ ತೋರಿದ 44 ಜನರಿದ್ದು ಅವರಿಗಾಗಿ ಜೂನ್ 9ರಿಂದ ಬೈಠಕಗಳನ್ನು ಪ್ರಾರಂಭಿಸಲು ವ್ಯವಸ್ಥೆ ಮಾಡಲಾಯಿತು.

## ಕರ್ನಾಟಕದ ದಾವಣಗೆರೆ ಕೇಂದ್ರದಲ್ಲಿ ಮುನ್ನಡೆ:

ಪೂಜ್ಯ ಗುರುಗಳ ಅನುಗ್ರಹ ಮತ್ತು ಅನುಮತಿಗಳೊಂದಿಗೆ 24ನೇ ಜನವರಿ, 2008ರಂದು ದಾವಣಗೆರೆ ಕೇಂದ್ರವು, ದಾವಣಗೆರೆ ಮತ್ತು ಹರಿಹರಗಳಿಂದ ಸುಮಾರು 8ಕಿ.ಮಿ ದೂರದ ದೊಡ್ಡಬತಿ ಗ್ರಾಮದಲ್ಲಿ ಎರಡು ಎಕರೆ ವ್ಯವಸಾಯ ಜಮೀನನ್ನು ಖರೀದಿಸಿದೆ.

ಎರಡೂ ಕೇಂದ್ರಗಳಿಗೂ ಒಂದಾಗಿ ಇಲ್ಲೊಂದು ಆಶ್ರಮವು ನಿರ್ಮಾಣಗೊಳ್ಳುವ ಆಶಯವಿದೆ. ಇದರೊಂದಿಗೆ ಅಭ್ಯಾಸಿಗಳ ಗೃಹಗಳಿಗಾಗಿ ಎರಡೂವರೆ ಎಕರೆ ಜಾಗವನ್ನು ಖರೀದಿಸಲಾಗಿದೆ.

ಪಕ್ಕದ ಗುಡ್ಡದ ಮೇಲಿನಿಂದ ಈ ಚಿತ್ರ ತೆಗೆಯಲಾಗಿದೆ. ಕೆಂಪು ಗುರುತಿನದು –1. ಮಿಷನ್ನಿಗಾಗಿ, 2. ಅಭ್ಯಾಸಿಗಳ ಗೃಹಸಮುಚ್ಛಾಯಕ್ಕಾಗಿ.




## ಮಾಹಾರಾಷ್ಟ್ರದ ಶೋಲಾಪುರ ಆಶ್ರಮಕ್ಕಾಗಿ ಪೂರ್ವ ಸಿದ್ಧತೆ



ಜುಲೈ 6, 2003ರ ತಮ್ಮ ಸಂದೇಶದಲ್ಲಿ ಪೂಜ್ಯ ಗುರುಗಳು 'ಬರುವ ದಶಕದಲ್ಲಿ ಆಶ್ರಮಗಳ ಸಂಖ್ಯೆಯು ವರ್ಧಿಸುತ್ತದೆ. ಈ ಯೋಜನೆಯನ್ನು ನಾವು ವಿಶ್ವಾಸಪೂರ್ವಕವಾಗಿ ಮುಂಗಾಣುತ್ತೇವೆ. ಹೆಚ್ಚುತ್ತಿರುವ ಅಗತ್ಯಗಳ ಪರಿಗಣನೆಗಾಗಿ ಬೇಕಾದ ಕಟ್ಟಡಗಳ ನಿರೀಕ್ಷೆಯು ವಿವೇಕಯುತವಾದುದು'.

ಶೋಲಾಪುರದ ಅಭ್ಯಾಸಿಗಳು ಈ ನಿಟ್ಟಿನಲ್ಲೊಂದು ಮುನ್ನಡೆ ಸಾಧಿಸಿದ್ದಾರೆ. ಮೇ 29ರಂದು ಅವರೆಲ್ಲ ಸೇರಿ ಒಂದುವರೆ ಎಕರೆ ಭೂಮಿಯನ್ನು ಖರೀದಿಸಿ ಮಿಷನ್ನಿಗೆ ಕೊಡುಗೆಯಾಗಿ ನೀಡಿದ್ದಾರೆ. ಭೂಮಿಯು ಶೋಲಾಪುರದಿಂದ 5ಕಿ.ಮಿ ದೂರದ ಅಕಲ್ಕೋಟ್ ರಸ್ತೆಯಲ್ಲಿದೆ.

ಆ ದಿನ ಭೂಮಿಯ ನೋಂದಣಿ ಮತ್ತು ಅಭ್ಯಾಸಿಗಳಿಗಾಗಿ ಕಾರ್ಯಕ್ರಮದಲ್ಲಿ ಸ॥ಏ.ಪಿ.ದುರೈ ಮತ್ತು ಸ॥ಎಸ್.ವೈದ್ಯ, ವಲಯದ ಸಂಚಾಲಕರು ಉಪಸ್ಥಿತರಿದ್ದರು. ಶೋಲಾಪುರ, ಬರ್ಶಿ, ಒಸ್ಮನಾಬಾದ್, ಲಾತೂರ್ ಮತ್ತು ಔಸ ಗಳಿಂದ ಸುಮಾರು 120 ಅಭ್ಯಾಸಿಗಳು ಸೇರಿದ್ದರು. ಅನೇಕ ವರ್ಷಗಳ ಹಿಂದೆ ಶೋಲಾಪುರದ ಪ್ರಥಮ ಪ್ರಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದ ಸಹೋದರಿ ಅನಸೂಯ ರಾಮಚಂದ್ರನ್ ರವರ ಉಪಸ್ಥಿತಿ ವಿಶೇಷವಾದುದ್ದಾಗಿತ್ತು.

ಎಸ್ ಆರ್ ಸೀ ಎಮ್

# ಎಖೋಸ್ ಇಂಡಿಯ

ವಲಯ ಸುತ್ತುವರಿ

ಜುಲೈ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ 4

## ಬೇಸಿಗೆ ಶಿಬಿರಗಳು

### ಬೆಂಗಳೂರು

ಮೇ 24, 2008, ಶನಿವಾರದಂದು ಬನಶಂಕರಿ ಆಶ್ರಮದಲ್ಲಿ 3–18 ವಯಸ್ಸಿನ 40 ಮಕ್ಕಳು ಒಂದು ದಿನದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದರು. ಸ್ವಯಂಸೇವಕರು ಮತ್ತು ಮಾತಾ ಪಿತೃಗಳ ಬೆಂಬಲ ದೊರಕಿತು. ಶಿಬಿರವು ಪರಿಚಯ ಕಾರ್ಯಕ್ರಮದೊಂದಿಗೆ ಪ್ರಾರಂಭವಾಯಿತು, ಮುಂದಿನದು ಯೋಗ. ವಯೋಮಿತಿಯಂತೆ ಅವರನ್ನು 20ರ, ಎರಡು ಗುಂಪುಗಳನ್ನಾಗಿ ವಿಭಾಗಿಸಲಾಯಿತು. ಶಿಬಿರದಲ್ಲಿ ಅನೇಕ ಆಟಗಳನ್ನು ನಿಯೋಜಿಸಲಾಗಿತ್ತು. ಬುದ್ಧಿಶಕ್ತಿ ಮತ್ತು ತಂಡದ ಸಂಪರ್ಕದ ಆಟದಲ್ಲಿ 9 * 9 ರ ಚಚ್ಚೌಕವಿದ್ದಿತು. ಪ್ಲಾಸ್ಟರ್ ಆಫ್ ಪಾರಿಸ್‌ನಲ್ಲಿ ಮಗುವಿನ ಕೈ ಅಚ್ಚೊತ್ತಿ ಅದನ್ನು ಮಗುವು ಬಣ್ಣಹಾಕುವ ಕಲೆ, ಹಲವು ಮೂಲ ವಸ್ತುಗಳನ್ನು ಬಳಸಿ ನವೀನಮಾದರಿ ರಚನೆ, ಹಾಡುಗಳು, ಕ್ರಿಕೆಟ್, ಮೂಳೆ ಮತ್ತು ನಾಯಿ ಆಟ ಮತ್ತು ಮಕ್ಕಳ ಸ್ವಪ್ರೇರಿತ ಆಟಗಳನ್ನು ಆಡಿಸಲಾಯಿತು. ಮೌಲ್ಯಾಧಾರಿತ ಅಧ್ಯಾತ್ಮಿಕ ತರಬೇತಿ ತಂಡದ ಸಮಗ್ರ ಪರಿಯೋಜನೆಯ ಮೂಲಕ ಮೌಲ್ಯಗಳನ್ನು ತಿಳಿಯಪಡಿಸಲಾಯಿತು. ಆಹಾರದ ಬಗೆಗೂ ವಿಶೇಷ ಆಸಕ್ತಿ ವಹಿಸಲಾಯಿತು. ದಿನದ ಮಧ್ಯೆ ಶಕ್ತಿವರ್ಧಕ ಪಾನೀಯದಿಂದ, ಮಧ್ಯಾಹ್ನದ ಐಸ್ಕ್ರೀಮ್ ಮತ್ತು ಫ್ರೂಟ್ ಸಲಾಡ್ ಗಳು ದಿನಪೂರ ಸಂತಸವನ್ನು ಅಧಿಕಗೊಳಿಸುವಲ್ಲಿ ಸಹಕಾರಿಯಾದವು.





### ತಿರುವನಂತಪುರಮ್

ಏಪ್ರಿಲ್ 20ರಂದು ತಿರುವನಂತಪುರಮ್ ಕೇಂದ್ರದಲ್ಲಿ ಮಕ್ಕಳೊಂದಿಗೆ ತಂದೆ ತಾಯಿಯರನ್ನು ಪೂರ್ಣದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನಿಸಲಾಯಿತು. ನಮ್ಮ ಸ್ವಯಂ ಸೇವಕರು ಮನೆಮನೆಗೆ ಭೇಟಿ ನೀಡಿದುದರ ಫಲವಾಗಿ 52 ಮಕ್ಕಳು (ಅಭ್ಯಾಸಿ ಕುಟುಂಬಗಳಿಂದ ಕೇವಲ 12) ಉತ್ಸಾಹಭರಿತರಾಗಿ, ಪಾಲ್ಗೊಂಡರು. ಆಟಗಳಷ್ಟೇ ಅಲ್ಲದೆ ಕಥೆ ಹೇಳುವುದು,ಚಿತ್ರಕಲೆ ಮುಂತಾದ ಕಾರ್ಯಕ್ರಮಗಳಿದ್ದವು. ಅಭ್ಯಾಸಿಗಳ ಮಕ್ಕಳು ಐಶ್ವರ್ಯ ಸಂಗ್ರಹದ ನಿಷ್ಪ್ರಯೋಜಕತೆಯನ್ನು ತಿಳಿಯಪಡಿಸುವ ಮನೋಹರ ನಾಟಕವನ್ನು ಪ್ರಸ್ತುತ ಪಡಿಸಿದರು.

ಎಲ್ಲರಿಗೂ ಸುಸ್ವಾದ ಭೋಜನವಿದ್ದಿತು. ಮಕ್ಕಳು ಕ್ರಿಯಾಶೀಲರಾಗಿದ್ದಾಗ ತಂದೆ ತಾಯಿಯರು ಅಧ್ಯಾತ್ಮ ಮತ್ತು ಸಹಜಮಾರ್ಗದ ಕ್ಷಿಪ್ರ ವಿವರಣೆಯನ್ನು ಆಲಿಸಿದರು. ದಿನದ ಅಂತ್ಯದಲ್ಲಿ ಸಾಧನೆ ಪ್ರಾರಂಭಿಸುವ ಆಶಯವನ್ನು ವ್ಯಕ್ತಪಡಿಸಿದರು.





### ಅಹಮದಾಬಾದ್

ಅಹಮದಾಬಾದ್ ಕೇಂದ್ರದಲ್ಲಿ ಈಗ ಮಕ್ಕಳಿಗಾಗಿ ಬೇಸಿಗೆ ಶಿಬಿರಗಳು ಸರ್ವೇಸಾಮಾನ್ಯವಾಗಿವೆ. ಅಂತಹ ನಾಲ್ಕನೆಯ ಶಿಬಿರದಲ್ಲಿ ಈ ವರ್ಷದ ಮೇ 26ರಿಂದ 29ರ ವರೆಗೆ 34 ಮಕ್ಕಳು ಭಾಗವಹಿಸಿದ್ದರು. ಅದರ ಉದ್ದೇಶವು ಅವರಲ್ಲಿರುವ ಸೃಜನಾತ್ಮಕ ಸಾಮರ್ಥ್ಯವನ್ನು ತೋರ್ಪಡಿಸುವುದಷ್ಟೇ ಅಲ್ಲದೆ ಅವರ ಜಗತ್ತನ್ನು ಹೊಸ ಸ್ನೇಹಿತರಿಗಾಗಿ ತೆರೆದಿಡುವುದಾಗಿದ್ದಿತು.

ಚಟುವಟಿಕೆಯಲ್ಲಿ ಸೃಜನಾತ್ಮಕ ಕಥಾಲೇಖನ, ನಿಧಿ ಶೋಧನೆ, ಕರಕುಶಲತೆಯಲ್ಲಿ ಪ್ರಯತ್ನಗಳು, ಕುಂಬಾರಿಕೆ ಮತ್ತು ರಸಪ್ರಶ್ನೆಗಳ ಒಂದು ಸಮಾವೇಶವೂ ಸೇರಿದ್ದವು. ಮಕ್ಕಳು ಇಸ್ಕಾನ್ ದೇವಾಲಯಕ್ಕೆ ಭೇಟಿಯಲ್ಲಿ ಚಿತ್ರಕಲೆಯ ಮೂಲಕ ಭಗವಾನ್ ಕೃಷ್ಣನ ಜೀವನವನ್ನು, ಸುಂದರ ವನ ಪ್ರಕೃತಿ ಬನದಲ್ಲಿ ಹಾವುಗಳ ಜೀವನ ಮತ್ತು ಹವ್ಯಾಸಗಳ ಅರಿವನ್ನು ಪಡೆದು ಆನಂದಿಸಿದರು. ಕೊನೆಯ ದಿನದಂದು ಪಾತ್ರೆ ಮತ್ತು ತಟ್ಟೆ ತೊಳೆಯುವುದರಲ್ಲಿ ತಮ್ಮ ಕೌಶಲ್ಯವನ್ನು ತೋರುತ್ತ ಆಹಾರ ಮತ್ತು ನೀರಿನ ಸಂಪನ್ಮೂಲಗಳ ಸಂರಕ್ಷಣೆಯ ತಿಳುವಳಿಕೆ ಪಡೆದರು. ಪರಿಸರದ ಬಗೆಗಿನ ಪರಿಜ್ಞಾನ ಮತ್ತು ಸೃಜನಾತ್ಮಕ ಕೌಶಲ್ಯಗಳಿಕೆಗಳು ಈ ಮುದಭರಿತ ಬೇಸಿಗೆ ಶಿಬಿರದ ಒಟ್ಟಾರೆ ಲಾಭವಾಗಿತ್ತು.





### ನಂಜನಗೂಡು



ನಂಜನಗೂಡು ಮೈಸೂರು ಬಳಿಯ ಸಣ್ಣ ಪಟ್ಟಣ. ಅನುಕ್ರಮವಾಗಿ ಮೂರನೆಯ ವರ್ಷ ಶಾಲಾ ಮಕ್ಕಳಿಗಾಗಿ ನಮ್ಮ ಮಿಶನ್ನಿನ ಸ್ವಯಂಸೇವಕರು ಏಪ್ರಿಲ್ 13 ರಂದು ಬೆಳಿಗ್ಗೆ 9.00 ಗಂಟೆಯಿಂದ 12.00 ಗಂಟೆಯವರೆಗೆ ಒಂದು ತಿಂಗಳ ಕಾಲ ಬೇಸಿಗೆ ಶಿಬಿರ ನಡೆಸಿದರು. ಶ್ರೀ ನೀಲಕಂಠೇಶ್ವರ ಎಜುಕೇಷನ್ ಸೊಸೈಟಿ ಶಾಲೆಯಲ್ಲಿ ನಡೆಸಲಾಯಿತು.

ಬೆಳಗಿನ ಗೋಷ್ಠಿಯು ಮಿಷನ್ನಿನ ಪ್ರಾರ್ಥನೆಯೊಂದಿಗೆ ಪ್ರಾರಂಭ. ನಂತರ ಮಕ್ಕಳು ಚಿತ್ರಕಲೆ, ಕರಕುಶಲತೆ, ಹಾಡುವುದು, ಸಂಗೀತ, ರಸಪ್ರಶ್ನೆ ಮುಂತಾದ ವಿವಿದ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ವಿವಿದ ಶಾಲೆಗಳ ಮತ್ತು ಸನಿಹದ ಗ್ರಾಮಗಳ 150 ವಿದ್ಯಾರ್ಥಿಗಳು ಪಾಲ್ಗೊಂಡರು. ಮಕ್ಕಳ ಕಾರ್ಯಕ್ಷಮತೆಯನ್ನು ತಂದೆತಾಯಿಯರಿಗಾಗಿ ಪ್ರದರ್ಶಿಸಲಾಯಿತು.

ಮೇ 11ರಂದು ಸಮಾರೋಪವಿದ್ದು ಪ್ರದರ್ಶನವನ್ನು ಉದ್ಘಾಟಿಸಲು ಸಾ॥ಪ್ರಭಾಕರ್ ರವರು ಬೆಂಗಳೂರಿನಿಂದ ಆಗಮಿಸಿದರು. ಮೈಸೂರಿನ ಸಾ॥ಶ್ರೀನಿವಾಸ್ ಮತ್ತು ಶಾಲೆಯ ಮುಖ್ಯ ಅಧ್ಯಾಪಕಿ ಸಾ॥ ರತ್ನಾ ಭಟ್ಟಾಚಾರ್ಜೀ ರವರು ಮುಖ್ಯ ಅತಿಥಿಗಳಾಗಿದ್ದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ.ಬಿ. ಸೋಮಶೇಖರ್ ರವರು ತಮ್ಮ ಭಾಷಣದಲ್ಲಿ ಇಂದಿನ ಸಮಾಜದಲ್ಲಿ ಆಧುನಿಕ ತಂತ್ರಜ್ಞಾನದ ಒತ್ತಡದಿಂದಾಗಿ ಲುಪ್ತವಾಗುತ್ತಿರುವ ಮೌಲ್ಯಗಳನ್ನು ಬೇರೂರಿಸಲು ಇದು ಸೂಕ್ತ ಮತ್ತು ಅರ್ಹ ವೇಳೆ ಎಂದು ತಿಳಿಸಿದರು.

## ಹದಿಹರಯದವರಿಗೊಂದು ಬದಲಾವಣೆ, ಅಹಮದಾಬಾದ್

ಹದಿಹರೆಯದವರು ಗುಂಪಾಗಿ ಜೀವನಪಥದ ತಿರುವಿನಲ್ಲಿದ್ದು ಜೀವನದ ಗೊಂದಲದ ಸೂಚನೆಯುಳ್ಳವರಾಗಿದ್ದಾರೆ. ಮೌಲ್ಯಗಳ ಅಳವಡಿಕೆಯ ಅಗತ್ಯವನ್ನು ಭರಿಸುವ ಸಲುವಾಗಿ, ಅಹಮದಾಬಾದ್ ಕೇಂದ್ರದ 19 ಹದಿಹರೆಯದವರು ಮೇ 24 ಮತ್ತು 25ರಂದು ಸ್ಥಳೀಯ ಆಶ್ರಮದಲ್ಲಿ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಕಾರ್ಯಾಗಾರದ ಉದ್ದೇಶ ಸಂಘದಲ್ಲಿ ಜ್ಞಾನಾರ್ಜನೆ; ಪಾಲ್ಗೊಂಡವರು ತಾವೇ ಕ್ರಿಯೆಗಳ ವೇಳಾಪಟ್ಟಿಯನ್ನು ಸಿದ್ಧಗೊಳಿಸಿದರು ಹಾಗೂ ವಿತರಣೆ ಮತ್ತು ಬದಲಾವಣೆ, ಆರ್ಥಿಕತೆ, ಮೌಲ್ಯಮಾಪನ ಮತ್ತು ವರದಿ ಮಾಡುವುದು ಈ ಅಂಶಗಳನ್ನು ತಮ್ಮೊಳಗೆ ಹಂಚಿಕೊಂಡರು.

ತನ್ನ ಕೋಪವನ್ನು, ನಿರಾಶೆಯನ್ನು ಮತ್ತು ನಕಾರಾತ್ಮಕ ಭಾವನೆಗಳನ್ನು ನಿಭಾಯಿಸುವ ಅಗತ್ಯವನ್ನು ತೋರ್ಪಡಿಸುವ ದೃಶ್ಯಾವಳಿಗಳಿಂದ ನಿಜಜೀವನದ ಪರಿಸ್ಥಿತಿಗಳನ್ನು ಪಾಲ್ಗೊಂಡವರೇ ಪ್ರಸ್ತುತ ಪಡಿಸಿದರು. ತಿಂಗಳಿಗೆ 10,000 ರೂಪಾಯಿಗಳ ಆಯವ್ಯಯವನ್ನು ಅಂದಾಜುಮಾಡಲು ಹದಿಹರೆಯದವರಿಗೆ ವಹಿಸಿದುದು ಬಹು ಆಕರ್ಷಕವಾಗಿತ್ತು. ಪಾಲ್ಗೊಂಡವರಿಗೆ ಇದು ಹಣದ ಮೌಲ್ಯ, ತಮ್ಮ ಮಾತಾಪಿತೃಗಳ ಆರ್ಥಿಕ ಸಮಸ್ಯೆಗಳನ್ನು ಅರಿಯಲು ಅವಕಾಶ ನೀಡಿತು ಹಾಗೂ ಅಗತ್ಯತೆಗಳು ಮತ್ತು ಆಶೆಗಳ ನಡುವೆ ವ್ಯತ್ಯಾಸವನ್ನು ಗುರುತಿಸಲು ಕಲಿಸಿತು.

ಮಿಷನ್ನಿನ ಪುಸ್ತಕಗಳು ಮತ್ತು ನಿಯತಕಾಲಿಕಗಳನ್ನು ಓದಿ ನಂತರ ನೈತಿಕತೆ, ಶಿಸ್ತು ಮತ್ತು ಸತ್ಯದಂತಹ ವಿಚಾರಗಳ ಬಗ್ಗೆ ಸೂಚನಾಪಟಗಳ ಮೂಲಕ ಒಬ್ಬೊಬ್ಬರು ಪ್ರಸ್ತುತ ಪಡಿಸಿದರು. ಗುಂಪು ಆಟದ ಮೂಲಕ ಜೀವನದ ಆದ್ಯತೆಗಳನ್ನು ಎತ್ತಿ ತೋರಲಾಯಿತು.

ಡಾ.ಜಿತೇಂದ್ರ ಜಟ್ಟರ್ ರವರು ಜ್ಞಾಪಕಶಕ್ತಿ ವರ್ಧನೆಯ ಬಗ್ಗೆ ಮಾತನಾಡಿದರು ಮತ್ತು ಸ॥ ಖಾರ್ ರವರು ಸ್ವಯಂ ಸೇವೆಯ ವಿಚಾರ ಮತ್ತು ಅದರ ಪ್ರಾಯೋಗಿಕ ರೂಪಗಳ ಬಗ್ಗೆ ಅಭ್ಯರ್ಥಿಗಳೊಂದಿಗೆ ವಿಚಾರ ವಿನಿಮಯ ಮಾಡಿದರು. ಆನಂತರ ಹದಿಹರೆಯದವರು ಅನೇಕ ಕ್ರಿಯಾತ್ಮಕತೆಯಲ್ಲಿ ಭಾಗವಹಿಸಿದರು. ಸ॥ಸುರೇಶ್ ರಾಜಗೋಪಾಲನ್ ರವರು ಚಾರಿತ್ರ್ಯ ನಿರ್ಮಾಣದಿಂದ ದೊರಕುವ ಮೌಲ್ಯಗಳು ಮತ್ತು ವ್ಯಕ್ತಿಯ ಪರಿವರ್ತನೆಯಲ್ಲಿ ಮಿಷನ್ನಿನ ಪ್ರಾರ್ಥನೆಯ ಉಪಯುಕ್ತತೆಯ ಬಗ್ಗೆ ಮಾತನಾಡಿದರು.




## ಸಹಜ ಶಿಬಿರ, ಹೈದರಾಬಾದ್

ತುಮುಕುಂಟ ವಲಯ ಆಶ್ರಮದಲ್ಲಿ 09.05.08 ರಿಂದ 11.05.08ರವರೆಗೆ 9ರಿಂದ 17ರ ವಯಸ್ಸಿನ ಮಕ್ಕಳಿಗಾಗಿ ಸಹಜ ಶಿಬಿರವನ್ನು ನಿಯೋಜಿಸಲಾಗಿತ್ತು. ಈ ದಿನಗಳಲ್ಲಿ ಮಕ್ಕಳು ಉತ್ಸಾಹದಿಂದ ಆಟಗಳು, ಮೌಲ್ಯಾಧಾರಿತ ಹಾಗೂ ವಿಚಾರ–ಪ್ರಚೋದಕ ಚರ್ಚಾಕೂಟಗಳಲ್ಲಿ ಭಾಗವಹಿಸುವುದಲ್ಲದೇ ಪುಸ್ತಕ ಭಂಡಾರದಲ್ಲಿ ಪುಸ್ತಕ ಓದುವುದರಲ್ಲಿ ಆಸಕ್ತರಾಗಿದ್ದರು. ಬೇಸಿಗೆಯ ತಾಪದಿಂದಾಗಿ ಮಧ್ಯಾಹ್ನದಲ್ಲಿ ಒಳಾಂಗಣದ ಆಟಗಳು ಮತ್ತು ಚಟುವಟಿಕೆಗಳು (ಚೆಸ್, ಕೇರಂ, ಒಗಟುಗಳು, ಆರಿಗ್ಯಾಮಿ, ವೈದಿಕಗಣಿತ ಮುಂತಾದವು) ಮತ್ತು ಸಂಜೆ ಹೊರಾಂಗಣದ ಆಟಗಳಿದ್ದವು. ಹಿರಿಯ ಮಕ್ಕಳು ಆಟಗಳಲ್ಲಿ ತಮ್ಮ ಆಯ್ಕೆಗಳನ್ನು ವ್ಯಕ್ತಪಡಿಸಿದರು. ಚಿಕ್ಕ ಮಕ್ಕಳು, ತಮಾಷೆ ಭರಿತ ಆಟಗಳನ್ನು ಆನಂದಿಸಿದರು. ಶನಿವಾರ ಸಂಜೆ ಮತ್ತು ಭಾನುವಾರ ಮಧ್ಯಾಹ್ನ ಮಕ್ಕಳಿಗೆ ಚಲನಚಿತ್ರಗಳನ್ನು ತೋರಿಸಲಾಯಿತು. ಮಕ್ಕಳಿಗೆ ಮುಕ್ತವಾಗಿ ಯಥಾವತ್ತಾಗಿ ತಮ್ಮ ಅನಿಸಿಕೆಗಳು ಮತ್ತು ಸಲಹೆಗಳನ್ನು ನೀಡಲು ಉತ್ತೇಜಿಸಲಾಯಿತು.

## ಇಂದೋರ್



ಮೇ18, 2008ರಂದು ಒಂದು ಯುವ ಕಾರ್ಯಕ್ರಮ ನಡೆಯಿತು. ನಮ್ಮ ಮಿಷನ್ನಿನ ಸಾಹಿತ್ಯದಲ್ಲಿ ಅಡಕವಾಗಿರುವ ಎಣೆಯಿಲ್ಲದ ಜ್ಞಾನ ಮತ್ತು ವಿವೇಕವನ್ನು ಬೆಳಕಿಗೆ ತರುವುದು ಮುಖ್ಯ ಉದ್ದೇಶ. ಈ ಕಾರ್ಯಕ್ರಮಕ್ಕೆ ಮೂರು ವಾರಗಳ ಮುಂಚಿತವಾಗಿಯೇ ಸಿದ್ಧತೆ ಪ್ರಾರಂಭವಾಗಿ 25 ಅಭ್ಯಾಸಿಗಳು ಪಾಲ್ಗೊಳ್ಳುವ ಆಸಕ್ತಿ ತೋರಿದರು. ಪಾಲ್ಗೊಂಡವರನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಯಿತು. ಪ್ರೇಮ, ವೈರಾಗ್ಯ, ಜ್ಞಾನ ಮತ್ತು ಭಕ್ತಿ. ಪ್ರತಿ ತಂಡಕ್ಕೂ ಪುಸ್ತಕವೊಂದನ್ನು ನೀಡಿ ವಿಚಾರ ಮಂಡಿಸಲು ತಿಳಿಸಲಾಯಿತು. ತಂಡಗಳನ್ನು ಸ॥ಸುರೇಂದ್ರ ತ್ರಿಪಾಟಿ, ಸ॥ಭೂಪೇಂದ್ರ ಭಟೋರೆ, ಸ॥ಸಚಿನ್ ಖೇಂಡೇಕರ್ ಮತ್ತು ಸ॥ಅಮಿತ್ ಭಟೋರೆ ಮಾರ್ಗದರ್ಶಿಸಿದರು. ಪ್ರತಿ ಗುಂಪಿನಲ್ಲೂ ತಮ್ಮ ವೈಚಾರಿಕತೆ ನೀಡಲು ಒಬ್ಬ ಹಿರಿಯ ಅಭ್ಯಾಸಿ ಇದ್ದರು. ಸ॥ರಮಾಕಾಂತ್ ಅಗರ್ವಾಲ್ ರವರು ಕಾರ್ಯಕ್ರಮ ನಿರ್ದೇಶನದೊಂದಿಗೆ ರಾಜೇಶ್ ರಾವೇರ್ಕರ್ ರವರು ಕಾರ್ಯಕ್ರಮ ನಡೆಸಿದರು.

ಒಂದೇ ಪುಸ್ತಕವು ಎಷ್ಟೆಲ್ಲಾ ಸಂದೇಶಗಳನ್ನೊಳಗೊಂಡಿದೆ ಮತ್ತು ಅದನ್ನೇ ಎಷ್ಟೊಂದು ದೃಷ್ಟಿಕೋನಗಳು ಮತ್ತು ವಿವಿಧ ಕಲ್ಪನೆಗಳಿಂದ ಕಾಣಬಹುದು ಎಂಬುದು ವಿಸ್ಮಯಕಾರಕವಾಗಿತ್ತು. ಒಂದಾನೊಂದು ದಿನ ಅವರ ಆಶೀರ್ವಾದದಿಂದ ನಮ್ಮನ್ನು ಪೂರ್ವನಿಶ್ಚಿತ ಕಲ್ಪನೆಗಳಿಂದ ಮುಕ್ತರಾಗಿ ನಾವು ವಿಕಾಸಗೊಳ್ಳಲು ಸಾಧ್ಯವಾಗುವುದೆಂಬ ಹಾಗೂ ಈ ದೈವೀ ಲೇಖನಗಳಿಂದ ಅವರು ನಮಗೆ ತಿಳಿಯಪಡಿಸಬೇಕೆಂಬುದನ್ನು ಕಂಡರಿಯಲು ಸಾಧ್ಯವಾದೀತು ಎಂಬ ದೃಢ ಭಾವನೆ ನಮ್ಮಲ್ಲಿ ಸ್ಫುರಿಸಿತು.

## ಮಕ್ಕಳ ಕೇಂದ್ರದ ಕ್ರಿಯಾತ್ಮಕತೆ, ಜೈಪುರ



ಮೇ 11ರಂದು 3–17ರ ವರೆಗಿನ ಮಕ್ಕಳು ಮತ್ತು ಹದಿಹರೆಯದವರು ಎರಡು ಗಂಟೆ ಕಾಲ ತಮ್ಮ ಚಾಕಚಕ್ಯತೆಯನ್ನು ಪ್ರದರ್ಶಿಸಿದರು. ಅವರು ಅಭ್ಯಾಸಿ ವೃಂದವನ್ನು ಮೌಲ್ಯಾಧಾರಿತ ಕಥೆಗಳು, ಪದ್ಯಗಳು ಮತ್ತು ಹಾಡುಗಳಿಂದ ಗುರುಪ್ರೇಮವನ್ನು ವ್ಯಕ್ತಪಡಿಸಿ ರಂಜಿಸಿದರು. ಎರಡು ನಾಟಕ ಪ್ರದರ್ಶನಗಳಿದ್ದವು. ನಾಟಕಗಳಲ್ಲಿ 'ಧರ್ಮವು ವಿಭಜಿಸುತ್ತದೆ, ಆಧ್ಯಾತ್ಮಿಕತೆಯು ಒಂದುಗೂಡಿಸುತ್ತದೆ' ಮತ್ತು 'ದೇವರು ಸರ್ವವ್ಯಾಪಿ' ಎಂಬ ಸಂದೇಶಗಳಿದ್ದವು. ಈ ದಿನಕ್ಕಾಗಿ ಮಕ್ಕಳು ಬಹು ದಿನಗಳಿಂದ ಪ್ರತಿ ಭಾನುವಾರವು ಕೇಂದ್ರದಲ್ಲಿ ತಯಾರಿ ನಡೆಸುತ್ತಿದ್ದರು.

ಮಕ್ಕಳ ಪ್ರದರ್ಶನದಿಂದ ಉತ್ತೇಜಿತರಾದ ಹಲವು ಯುವ ಅಭ್ಯಾಸಿಗಳು ಗುಂಪುಗಾಯನದಲ್ಲಿ ಸೇರಿದರು. ಶಿಬಿರದ ಅಂತ್ಯದಲ್ಲಿ ಪೂಜ್ಯ ಗುರುಗಳ ಪ್ರಸ್ತುತಿಯು ಬಹು ಗಾಢವಾಗಿ ಅನುಭವವಾಯಿತು. ಒಟ್ಟಿನಲ್ಲಿ ಮಕ್ಕಳು ವೇದಿಕೆಯಲ್ಲಿ ತಮ್ಮನ್ನು ಪ್ರದರ್ಶಿಸಿಕೊಳ್ಳಲು ಮತ್ತು ಅಭ್ಯಾಸಿಗಳು ತಮ್ಮ ಮಕ್ಕಳನ್ನು ಗುರುಗಳ ಪ್ರೇಮ ಮತ್ತು ಆಸರೆಯಲ್ಲಿ ಬೆಳೆಯುವುದನ್ನು ಕಾಣುವುದು ಹೃದಯಂಗಮ ಅನುಭವವಾಗಿತ್ತು.



# ಬೆಳಕಿನ ಕೇಂದ್ರಗಳು

## ಹಿಮಾಲಯಕ್ಕೆ ಮತ್ತೊಂದು ಮಹಾದ್ವಾರ, ಪಿತೋಡಾಗಢ್

"ಆಶ್ರಮವನ್ನು ನಾನು ಜ್ಯೋತಿ ಕೇಂದ್ರವೆಂದು ಕರೆದಿದ್ದೇನೆ. ಸೂಕ್ತಕಾಲ ಒದಗಿತೆಂದೂ, ದಿವ್ಯಲೋಕಕ್ಕೆ ಹಲವು ದ್ವಾರಗಳು ತೆರೆಯುವುವೆಂದೂ ಅವನು ಚಿಂತಿಸಿದಾಗ ದೇವರು ಅನುಮತಿಸುವನೆಂಬ ಪುರಾತನ ಸಂಪ್ರದಾಯವಿದೆ. ಮೊದಲ ದ್ವಾರವೆಂದರೆ ಈ ದ್ವಾರಗಳ ಪ್ರತಿಷ್ಠಾಪನೆಗಾಗಿ ಅವತರಿಸುವ ಮಹಾನ್ ವ್ಯಕ್ತಿ. ಆತ ಬೋಧಿಸುತ್ತಾನೆ. ಆತ ಸಂದೇಶ ನೀಡುತ್ತಾನೆ. ಆತ ಕರೆ ನೀಡುತ್ತಾನೆ. ಜನರು ಬಂದು ಒಂದೆಡೆ ಸೇರಿ ಅಲ್ಲಿಂದ ಯಾತ್ರಾರಂಭ ಮಾಡಲು ನಾವು ಆಶ್ರಮಗಳನ್ನು ನಿರ್ಮಿಸುತ್ತೇವೆ. ಬಹುನಿಜಾರ್ಥದಲ್ಲಿ ಸೂಕ್ತವಾಗಿ ಬಳಸಿದ್ದೇ ಆದರೆ ಅದು ದಿವ್ಯಲೋಕಕ್ಕೆ ಪ್ರವೇಶದ್ವಾರವಾಗುವುದು." ಪೂಜ್ಯ ಗುರುಗಳು ಡಿಸೆಂಬರ್ 19, 2004ರಂದು ಪಿತೋಡಾಗಢ್ ಆಶ್ರಮದ ಉದ್ಘಾಟನೆಯ ಸಂದರ್ಭದಲ್ಲಿ ಇಂತು ನುಡಿದರು.



ಆಶ್ರಮವು 5400 ಅಡಿ ಎತ್ತರದಲ್ಲಿ ಪಿತೋಡಾಗಢ್ ಜಿಲ್ಲೆಯಲ್ಲಿ, ಸತ್ಕೋಲ್ ನಿಂದ ಈಶಾನ್ಯ ದಿಕ್ಕಿನಲ್ಲಿ 150 ಕಿ.ಮಿ ದೂರದಲ್ಲಿದೆ. ಗುರುಗಳಿಂದ ಸ್ವತಃ ರೂಪಿತವಾಗಿರುವ ಈ ಆಶ್ರಮವು ಹಿಮಾಲಯದ ಉಪಪರ್ವತಗಳ ನಡುವೆ ಪೂರ್ವಕ್ಕೆ ನೇಪಾಳ ಮತ್ತು ಉತ್ತರಕ್ಕೆ ಟಿಬೇಟ್ ಮಧ್ಯೆ ಮುತ್ತಿನ ಮಣಿಯಂತಿದೆ  ಐದುನೂರು ಜನಕ್ಕೆ ಸ್ಥಳವಿರುವ ಧ್ಯಾನ ಮಂದಿರವಲ್ಲದೆ ಗುರುಗಳ ವಸತಿ, ಪಾಕಶಾಲೆ ಮತ್ತು ಒಂದು ಕೊಠಡಿಗಳಿವೆ.




ಆಶ್ರಮ ನಿರ್ಮಾಣವೇ ಒಂದು ಮಹತ್ಕಾರ್ಯವಾಗಿತ್ತು; ಕಾರಣ, ನಿರ್ಮಾಣ ವಸ್ತುಗಳನ್ನು 150 ಕಿ.ಮಿ ದೂರದಿಂದ ಪರ್ವತವೇರಿ ಸಾಗಿಸಬೇಕಾಗಿದ್ದಿತು. ನಿರ್ಮಾಣಕಾರ್ಯವು ಏಪ್ರಿಲ್ 2004ರಲ್ಲಿ ಪ್ರಾರಂಭವಾಗಿ ಗುರುಗಳ ಅನುಗ್ರಹದಿಂದ 9 ತಿಂಗಳ ದಾಖಲೆ ಅವಧಿಯಲ್ಲಿ ಸಂಪೂರ್ಣವಾಯಿತು. ಅಲ್ಲಿ ಇನ್ನೂ ನಿವಾಸ ಗೃಹವಿಲ್ಲದ ಕಾರಣ ವಿಶೇಷ ಅನುಮತಿ ಇಲ್ಲದೆ ಆಶ್ರಮಕ್ಕೆ ಭೇಟಿ ನೀಡಲು ಗುರುಗಳು ಅನುಮತಿಸಿರುವುದಿಲ್ಲ.





**To subscribe to this Newsletter please visit http://www.srcm.org/centers/as/in/newsletter/index.jsp**
**For feedback, suggestions and news articles please send email to in.newsletter@srcm.org**

© 2008 Shri Ram Chandra Mission ("SRCM"). All rights reserved.
"Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.
This message may be edited for content and is intended exclusively for the members of SRCM.